ವಿ-330 (75)

**ಶ್ರೀ ಪಿ. ಆರ್. ರಮೇಶ್, ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು, ಇವರ ನಿಯಮ 330ರ ಅಡಿಯಲ್ಲಿ ನೀಡಿರುವ ಸೂಚನೆಗೆ ಹೇಳಿಕೆ**

**ಸೂಚನೆ**

"ರಾಜ್ಯ ಸರ್ಕಾರದ ಕ್ರಮಗಳನ್ನು ಪರಿಶೀಲಿಸುವ ಹಾಗೂ ರಾಜ್ಯ ಸರ್ಕಾರವು, ಕರ್ನಾಟಕ ಲೋಕಸೇವಾ ಆಯೋಗದ ಶಿಫಾರಸ್ಸುಗಳನ್ನು ಅಂಗೀಕರಿಸುವ ಅಥವಾ ನಿರಾಕರಿಸುವ ವಿಷಯಕ್ಕೆ ಸಂಬಂಧಿಸಿದಂತೆ, ರಾಜ್ಯ ಸರ್ಕಾರದ ಯಾವುದೇ ಏಕಪಕ್ಷೀಯ ನಿರ್ಧಾರವಲ್ಲದೆ ಶಾಸನ ರಚನಾ ಅಧಿಕಾರಿಗಳನ್ನು ಸಂರಕ್ಷಿಸಲು ವಿಶೇಷ ಹಕ್ಕುಬಾಧ್ಯತೆಗಳೊಂದಿಗೆ ವಿಧಾನ ಮಂಡಲಕ್ಕೆ ಅಧಿಕಾರ ನೀಡಿರುವಂತಹ ಅನುಚ್ಛೇದ 323 (2) ರಡಿಯಲ್ಲಿ ಸಾಂವಿಧಾನಿಕ ಅಗತ್ಯತೆಯ ಹೊಣೆಗಾರಿಕೆಯನ್ನು ಪೂರೈಸದೆ ಕರ್ನಾಟಕ ಲೋಕಸೇವಾ ಆಯೋಗವು ಸಲ್ಲಿಸಿದ 2011ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್ ಗಳ ಆಯ್ಕೆ ಪಟ್ಟಿ/ಸಲಹೆಗೆ ಸಂಬಂಧಿಸಿದಂತೆ ಮಾನ್ಯ ಕರ್ನಾಟಕ ಉಚ್ಚ ನ್ಯಾಯಲಯದ ದಿ:09.03.2018 (ರಿಟ್ ಸಂಖ್ಯೆ: 13617-13627/2017) ರ ತೀರ್ಪನ್ನು ಸರ್ಕಾರವು ಪಾಲಿಸುವುದೇ ಎಂಬ ವಿಷಯವನ್ನು ಸದನದಲ್ಲಿ ಪ್ರಸ್ತಾಪಿಸಲು ಬಯಸುತ್ತೇನೆ."

* * *

**ಹೇಳಿಕೆ**

2011ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್ಸ್ ಆಯ್ಕೆ ಪ್ರಕ್ರಿಯೆಯಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಗಳ ಆರೋಪದ ಬಗ್ಗೆ ಸಿ.ಐ.ಡಿ ನೀಡಿರುವ ವರದಿ, ಮಾನ್ಯ ಅಡ್ವೊಕೇಟ್ ಜನರಲ್ ರವರ ಅಭಿಪ್ರಾಯ ಮತ್ತು ಕಾನೂನು ಇಲಾಖೆಯ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಆಯ್ಕೆ ಪ್ರಕ್ರಿಯೆಯನ್ನು ಜರುಗಿಸಲು ಕರ್ನಾಟಕ ಲೋಕಸೇವಾ ಆಯೋಗಕ್ಕೆ ಕೋರಲಾದ ಪತ್ರಗಳನ್ನು ದಿನಾಂಕ: 14.08.2014ರ ಸರ್ಕಾರಿ ಆದೇಶದಲ್ಲಿ ಹಿಂಪಡೆಯಲಾಗಿರುತ್ತದೆ.

ಸದರಿ ಸರ್ಕಾರಿ ಆದೇಶವನ್ನು ಪ್ರಶ್ನಿಸಿ ಕೆಲವು ಅಭ್ಯರ್ಥಿಗಳು ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯಲ್ಲಿ ದಾಖಲಿಸಿದ ಅರ್ಜಿ ಸಂಖ್ಯೆ: 6268-6395/2014 ಹಾಗೂ ಇದೇ ವಿಷಯಕ್ಕೆ ಸಂಬಂಧಿಸಿದ ಇತರ ಪ್ರಕರಣಗಳಲ್ಲಿ ಮಾನ್ಯ ನ್ಯಾಯಮಂಡಳಿಯು ದಿನಾಂಕ: 19.10.2016ರಂದು ನೀಡಿದ ತೀರ್ಪಿನಲ್ಲಿ ದಿನಾಂಕ: 14.08.2014ರ ಸರ್ಕಾರಿ ಆದೇಶವನ್ನು ರದ್ದುಗೊಳಿಸಿದೆ.

ಮುಂದುವರೆದು, ದಿನಾಂಕ: 01.03.2017ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಕರ್ನಾಟಕ ಆಡಳಿತ ನ್ಯಾಯಮಂಡಳಿಯ ದಿನಾಂಕ: 19.10.2016ರ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸದೇ ಇರಲು ನಿರ್ಣಯಿಸಲಾಯಿತು. ಈ ಹಿನ್ನೆಲೆಯಲ್ಲಿ 2011ನೇ ಸಾಲಿನಲ್ಲಿ ಆಯ್ಕೆಗೊಂಡಿರುವ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶವನ್ನು ನೀಡಲು ಸಂಬಂಧಪಟ್ಟ ಆಡಳಿತ ಇಲಾಖೆಗಳಿಗೆ ಸೂಚನೆಯನ್ನು ನೀಡಲಾಗಿತ್ತು.

ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯ ದಿನಾಂಕ: 19.10.2016ರ ಆದೇಶದ ವಿರುದ್ಧ ಕೆಲವು ಅಭ್ಯರ್ಥಿಗಳು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 13617-27/2017 & 14529/2017ನ್ನು ದಾಖಲಿಸಿದ್ದು, ಮಾನ್ಯ ಉಚ್ಚ ನ್ಯಾಯಲಯವು ದಿನಾಂಕ: 09.03.2018ರಂದು ನೀಡಿದ ಅಂತಿಮ ತೀರ್ಪಿನಲ್ಲಿ 2011ನೇ ಸಾಲಿನ ಆಯ್ಕೆ ಪ್ರಕ್ರಿಯೆಯನ್ನು ಹಿಂಪಡೆದು ಹೊರಡಿಸಲಾದ ದಿನಾಂಕ: 14.08.2014ರ ಸರ್ಕಾರಿ ಆದೇಶವನ್ನು ಎತ್ತಿಹಿಡಿದಿದೆ.

...2

ಸದರಿ ತೀರ್ಪಿಗೆ ತಡೆಯಾಜ್ಞೆಯನ್ನು ನೀಡುವಂತೆ ಕೋರಿ ಕೆಲವು ಅಭ್ಯರ್ಥಿಗಳು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ದಾಖಲಿಸಿದ ಎಸ್.ಎಲ್.ಪಿ. ಸಂಖ್ಯೆ: 7166-7178/2018 ಹಾಗೂ ಅದರೊಂದಿಗಿನ ಇತರ ಪ್ರಕರಣಗಳಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು 2011ನೇ ಸಾಲಿನ ನೇಮಕಾತಿಯ ಮುಖ್ಯ ಪರೀಕ್ಷೆಗೆ ಸಂಬಂಧಿಸಿದಂತೆ ಕೆಲವು ಅಂಶಗಳನ್ನು ಪರಿಶೀಲಿಸುವ ಬಗ್ಗೆ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯಕ್ಕೆ ನಿರ್ದೇಶನ ನೀಡಿ, ಸದರಿ ಎಸ್.ಎಲ್.ಪಿ. ಪ್ರಕರಣಗಳನ್ನು ದಿನಾಂಕ: 04.04.2018ರ ತೀರ್ಪಿನಲ್ಲಿ ವಿಲೇಗೊಳಿಸಿದೆ.

ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದಂತೆ ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 13617-27/2017 & 14529/2017ರ ಪ್ರಕರಣಗಳಲ್ಲಿ 2011ನೇ ಸಾಲಿನ ಅಭ್ಯರ್ಥಿಗಳಿಂದ ದಾಖಲಾದ ಮಧ್ಯಂತರ ಅರ್ಜಿಗಳನ್ನು ಪರಿಶೀಲಿಸಿ, ಉತ್ತರ ಪತ್ರಿಕೆಗಳ ಮರುಮೌಲ್ಯಮಾಪನ ಮಾಡುವಿಕೆಗೆ ನಿರ್ದೇಶಿಸಲು ಇದು ಯೋಗ್ಯ ಪ್ರಕರಣವಲ್ಲವೆಂದು ಅಭಿಪ್ರಾಯ ಪಟ್ಟು, ಈ ಸಂಬಂಧವಾಗಿ ದಾಖಲಾಗಿದ್ದ ಎಲ್ಲಾ ಮಧ್ಯಂತರ ಅರ್ಜಿಗಳನ್ನು ದಿನಾಂಕ: 13.07.2018ರ ತೀರ್ಪಿನಲ್ಲಿ ವಜಾಗೊಳಿಸಿರುತ್ತದೆ.

ಮುಂದುವರೆದು, ಮಾನ್ಯ ಉಚ್ಚ ನ್ಯಾಯಲಯದ ದಿನಾಂಕ: 13.07.2018ರ ತೀರ್ಪಿನ ವಿರುದ್ಧ ಸರ್ಕಾರದ ವತಿಯಿಂದಲೂ ಸಹ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ದಾಖಲಿಸಿದ್ದ ಎಸ್.ಎಲ್.ಪಿ. ಅರ್ಜಿಯನ್ನು (ಡೈರಿ ಸಂಖ್ಯೆ: 21729/2019) ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿನಾಂಕ: 09.08.2019ರ ತೀರ್ಪಿನಲ್ಲಿ ವಜಾಗೊಳಿಸಿರುತ್ತದೆ.

ಕರ್ನಾಟಕ ಲೋಕಸೇವಾ ಆಯೋಗವು ವಾರ್ಷಿಕ ವರದಿಯನ್ನು ಕಳುಹಿಸಿದ ಅವಧಿ ಮತ್ತು ಸರ್ಕಾರವು ಮಾನ್ಯ ವಿಧಾನ ಮಂಡಲದಲ್ಲಿ ಮಂಡಿಸಿದ ಅವಧಿಯ ಮಧ್ಯಂತರದಲ್ಲಿ 2011ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್ಸ್ ಆಯ್ಕೆ ಪ್ರಕ್ರಿಯೆಯನ್ನು ಜರುಗಿಸಲು ಆಯೋಗಕ್ಕೆ ಕೋರಲಾದ ಪತ್ರಗಳನ್ನು ಹಿಂಪಡೆದು ನೇಮಕಾತಿ ಪ್ರಕ್ರಿಯೆಯನ್ನು ಮುಕ್ತಾಯಗೊಳಿಸಿದ್ದ ದಿನಾಂಕ: 14.08.2014ರ ಸರ್ಕಾರಿ ಆದೇಶವನ್ನು ಮಾನ್ಯ ಕೆ.ಎ.ಟಿ.ಯು ರದ್ದುಗೊಳಿಸಿರುತ್ತದೆ. ವಿಧಾನ ಮಂಡಲದಲ್ಲಿ ಆಯೋಗದ ವಾರ್ಷಿಕ ವರದಿಯನ್ನು ಮಂಡಿಸುವ ಸಂದರ್ಭದಲ್ಲಿ ಸರ್ಕಾರವು ಮಾನ್ಯ ಕೆ.ಎ.ಟಿ.ಯ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸಿರಲಿಲ್ಲ. ಅಲ್ಲದೇ, ಸರ್ಕಾರವು ಆಯೋಗದ ಪ್ರಸ್ತಾವನೆಯನ್ನು ತಿರಸ್ಕರಿಸುವ ನಿರ್ಧಾರವನ್ನೂ ಸಹ ತೆಗೆದುಗೊಂಡಿರಲಿಲ್ಲ. ಆಯ್ಕೆ ಪ್ರಕ್ರಿಯೆ ಜರುಗಿಸಲು ಆಯೋಗಕ್ಕೆ ಕಳುಹಿಸಲಾಗಿದ್ದ ಪತ್ರಗಳನ್ನು ಹಿಂಪಡೆದಿದ್ದ ದಿನಾಂಕ: 14.08.2014ರ ಸರ್ಕಾರದ ಆದೇಶವು ಆ ಸಂದರ್ಭದಲ್ಲಿ ಕಾನೂನಾತ್ಮಕವಾಗಿ ಸಿಂಧುವಾಗಿರಲಿಲ್ಲ. ಹೀಗಾಗಿ, ಆಯೋಗದ ಪ್ರಸ್ತಾವವನ್ನು ಒಪ್ಪದಿರುವ ಕುರಿತು ಕಾರಣಗಳೊಂದಿಗೆ ವಿವರಣಾ ಪತ್ರವನ್ನು ಸಲ್ಲಿಸುವ ಸನ್ನಿವೇಶ ಉದ್ಭವಿಸಿರುವುದಿಲ್ಲ. ಆದುದರಿಂದ, ಸಂವಿಧಾನದ ಅನುಚ್ಛೇದ 323(2)ರ ಉಲ್ಲಂಘನೆ ಆಗಿರುವುದಿಲ್ಲ.

ಕರ್ನಾಟಕ ಲೋಕಸೇವಾ ಆಯೋಗದ ಆಯ್ಕೆ ಪಟ್ಟಿಯನ್ನು ರದ್ದುಪಡಿಸುವ/ತಿರಸ್ಕರಿಸುವ ಪ್ರಸ್ತಾವವು ಮಾನ್ಯ ಉಚ್ಚ ನ್ಯಾಯಾಲಯದ ತೀರ್ಪುಗಳ ಹಿನ್ನೆಲೆಯಲ್ಲಿ ಸಂಭವಿಸಿದ್ದು, ಮಾನ್ಯ ಉಚ್ಚ ನ್ಯಾಯಾಲಯದ ತೀರ್ಪುಗಳನ್ನು ಮಾನ್ಯ ಸರ್ವೋಚ್ಚ ನ್ಯಾಯಾಲಯವು ಎತ್ತಿಹಿಡಿದಿರುವುದರಿಂದ, ಸರ್ಕಾರಕ್ಕೆ ಲಭ್ಯವಿರುವ ಕಾನೂನಿನ ಆಸ್ಪದಗಳಾದ ಎಸ್.ಎಲ್.ಪಿ., ಮರುಪರಿಶೀಲನಾ ಅರ್ಜಿ ಸಲ್ಲಿಕೆ ಇತ್ಯಾದಿ ಅವಕಾಶಗಳು ಬರಿದಾಗಿದ್ದರಿಂದ, ಸರ್ಕಾರವು ಮಾನ್ಯ ಉಚ್ಚ ನ್ಯಾಯಾಲಯ ಹಾಗೂ ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನಗಳನ್ನು ಪಾಲಿಸಿರುತ್ತದೆ.

**ಕಡತ ಸಂಖ್ಯೆ: ಸಿಆಸುಇ 143 ಎಸ್‌ಎಸ್‌ಸಿ 2021**

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ.